# ಪ್ರತಿಭೆಯ ಖಣಿ ಬನ್ಸಾಲಿ

ಪದ್ಮಾವತಿ ಇದೀಗ ಪದ್ಮಾವತ್ ಆಗಿದ್ದಾಳೆ. ಹಾಗಿದ್ದೂ ಚಿತ್ರದ ಬಿಡುಗಡೆಯ ದಿನಾಂಕ ಖಚಿತವಾಗಿಲ್ಲ. ಸೆನ್ಸಾರ್ ಮಂಡಳಿಯ ಅನುಮತಿಯ ಹೊರತಾಗಿಯೂ ಚಿತ್ರ ಬಿಡುಗಡೆಗೆ ಸೂಕ್ತ ವಾತಾವರಣವಿಲ್ಲ ಎನ್ನುವುದು ವಿಪರ್ಯಾಸದ ಸಂಗತಿ. ಬಹುಶಃ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಮೊದಲ ಬಾರಿಗೆ ಸಿನಿಮಾವೊಂದನ್ನು ನೋಡದೆಯೇ ಸರ್ಕಾರಗಳು ನಿಷೇಧ ಹೇರಿದ್ದು ಇದೇ ಮೊದಲು. ಈ ಹಿಂದೆ ಚಿತ್ರಗಳು ನಿಷೇಧಗೊಂಡಿಲ್ಲ ಎಂದಲ್ಲ. ಆದರೆ ಆ ಚಿತ್ರಗಳ ಬಿಡುಗಡೆಯ ಬಳಿಕ ಪ್ರತಿಭಟನೆ ಉಂಟಾಗಿ ನಿಷೇಧಗೊಂಡಿವೆ. 'ಪದ್ಮಾವತಿ' ಮಾತ್ರ ಬಿಡುಗಡೆಗೆ ಮುನ್ನವೇ ನಿಷೇಧಕ್ಕೆ ಒಳಗಾಗಿ ಇತಿಹಾಸ ನಿರ್ಮಿಸಿದೆ. ಚಿತ್ರದ ನಿರ್ಮಾಪಕ – ನಿರ್ದೇಶಕ ಸಂಜಯ ಲೀಲಾ ಬನ್ಸಾಲಿ ಈಗ ಅನುಭವಿಸುತ್ತಿರುವ ನೋವನ್ನು ಬಣ್ಣಿಸುವುದು ಕಷ್ಟ. ಸಿನಿಮಾನೇ ಜೀವನ ಎಂದು ಬದುಕುವ ನಿರ್ದೇಶಖರಿಗೆ ಮಾತ್ರ ಈ ನೋವಿನ ಅರಿವಾದೀತು.

ಬಾಲಿವುಡ್‌ನ ಅತ್ಯಂತ ಸಂವೇದನಾಶೀಲ ಮತ್ತು ಪ್ರತಿಭಾವಂತ ನಿರ್ದೇಶಕ ಸಂಜಯ ಲೀಲಾ ಬನ್ಸಾಲಿ. ಈತನ ಸಿನಿಮಾ ಎಂದರೆ ಅದ್ಭುತ ದೃಶ್ಯಕಾವ್ಯವೇ. ಮೊದಲ ಬಾರಿ ನಿರ್ದೇಶಿಸಿದ 'ಖಾಮೋಶಿ' ನೋಡುಗರನ್ನು ವಿಹ್ವಲಗೊಳಿಸುವ ಚಿತ್ರ. ನಾನಾ ಪಾಟೇಕರ್ ಮತ್ತು ಸೀಮಾ ಬಿಸ್ವಾಶ್ ಈ ಚಿತ್ರದಲ್ಲಿ ನಿರ್ವಹಿಸಿದ ಮೂಗ– ಕಿವುಡ ದಂಪತಿಯ ಪಾತ್ರ ನೋಡಿದವರು ಥಿಯೇಟರಿನಲ್ಲೇ ಕಣ್ಣೀರಾದದ್ದಿದೆ. ಬ್ಲ್ಯಾಕ್, ಮೇರಿ ಕೋಮ್, ರಾಸ್‌ಲೀಲಾ, ಬಾಜಿರಾವ್ ಮಸ್ತಾನಿ, ದೇವದಾಸ್, ಸಾವರಿಯಾ, ಹಮ್ ದಿಲ್ ದೇ ಚುಕೆ ಸನಂ, ರೌಡಿ ರಾಥೋರ್– ಹೀಗೆ ಒಂದಕ್ಕಿಂತ ಒಂದು ವಿಭಿನ್ನ ಚಿತ್ರ ನಿರ್ಮಿಸಿ ನಿರ್ದೇಶಿಸಿರುವ ಬನ್ಸಾಲಿ ಇದೀಗ 'ಪದ್ಮಾವತಿ' ಚಿತ್ರ ನಿರ್ಮಿಸಿ ಅನುಭವಿಸುತ್ತಿರುವ ನೋವು ಮತ್ತು ಅವಮಾನ ನಮ್ಮ ದೇಶದಲ್ಲಿರುವ ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಭರವಸೆಯನ್ನೇ ಅಣಕಿಸುವಂತಿದೆ.

'ಪದ್ಮಾವತಿ' ಚಿತ್ರದಲ್ಲಿ ರಜಪೂತ ಹೆಮ್ಮೆಯನ್ನು ಅವಮಾನಿಸಲಾಗಿದೆ ಎನ್ನುವುದು ಬಿಡುಗಡೆಗೆ ಅಡ್ಡಿ ಮಾಡುತ್ತಿರುವ ಜಾತಿವಾದಿ ಸಂಘಟನೆ ಕರ್ಣಿ ಸೇನಾದ ಆರೋಪ. ಚಿತ್ರದಲ್ಲಿ ದೊರೆ ಅಲ್ಲಾವುದ್ದೀನ್ ಖಿಲ್ಜಿ ಮತ್ತು ರಾಣಿ ಪದ್ಮಾವತಿಯ ಮಧ್ಯೆ ಕನಸಿನ ನೃತ್ಯ ದೃಶ್ಯವೊಂದಿದೆ ಎನ್ನುವುದೂ ಅವರ ಹೇಳಿಕೆ. ತಮಾಷೆಯ ವಿಷಯವೆಂದರೆ ಈ ಚಿತ್ರಕ್ಕೆ ಪ್ರತಿಭಟನೆ ವ್ಯಕ್ತಪಡಿಸುತ್ತಿರುವ ಜನರು ಯಾರೂ ಈ ಸಿನಿಮಾವನ್ನು ನೋಡಿಲ್ಲ. ಈ ಜನರ ಪ್ರತಿಭಟನೆಗೆ ಹೆದರಿ ಮಧ್ಯಪ್ರದೇಶ ಮತ್ತು ಗುಜರಾತ್ ಮುಖ್ಯಮಂತ್ರಿಗಳು ಈಗಾಗಲೆ ಚಿತ್ರವನ್ನು ನಿಷೇಧಿಸಿ ಆದೇಶ ಹೊರಡಿಸಿದ್ದಾರೆ! ಚಿತ್ರವೊಂದು ಸೆನ್ಸಾರ್ ಮಂಡಳಿಯ ಅನುಮತಿ ಪಡೆಯುವುದಕ್ಕೆ ಮುಂಚೆಯೇ ಸರಕಾರಗಳಿಂದ ನಿಷೇಧಗೊಂಡಿರುವ ಉದಾಹರಣೆ ಇದೊಂದೇ ಇರಬೇಕು!

ಬನ್ಸಾಲಿ ಸ್ವತಃ ವೀಡಿಯೊವೊಂದನ್ನು ಮಾಡಿ ಜನರಲ್ಲಿ ಕೈ ಮುಗಿದು ಹೇಳಿದ್ದಾರೆ– ಈ ಚಿತ್ರದಲ್ಲಿ ರಜಪೂತ ಸಂಸ್ಕೃತಿಯ ಹೆಮ್ಮೆಯನ್ನು ಪ್ರದರ್ಶಿಸಿದ್ದೇನೆ. ರಾಣಿ ಪದ್ಮಾವತಿಯ ತ್ಯಾಗ, ಬಲಿದಾನದ ಕಥೆಯಿದೆ. ಖಿಲ್ಜಿ ಜೊತೆಗೆ ರಾಣಿ ಭಾಗವಹಿಸಿದ ಯಾವ ಕನಸಿನ ನೃತ್ಯದ ದೃಶ್ಯಗಳೂ ಇದರಲ್ಲಿ ಇಲ್ಲ!– ಎಂದು. ಆದರೆ ಕರ್ಣಿಸೇನೆಯವರು ಇದನ್ನು ಕೇಳಲು ಸಿದ್ಧವಿಲ್ಲ. 'ಬಿಡುಗಡೆಗೆ ಅವಕಾಶ ನೀಡುವುದಿಲ್ಲ. ಚಿತ್ರದ ನಿರ್ದೇಶಕ ಬನ್ಸಾಲಿ ತಲೆ ಕತ್ತರಿಸಿ ಹಾಗೂ ನಾಯಕಿ ಪಾತ್ರಧಾರಿ ದೀಪಿಕಾಳ ಮೂಗು ಕತ್ತರಿಸಿ ತಂದವರಿಗೆ ಐದು ಕೋಟಿ ರೂಪಾಯಿ ಕೊಡುತ್ತೇವೆ' ಎಂದು ಅವರು ಘೋಷಿಸಿದ್ದಾರೆ!

ಸೆನ್ಸಾರ್ ಮಂಡಳಿಯ ಮುಂದೆ ಬಂದರೂ ಎರಡು ರಾಜ್ಯಗಳ ಚುನಾವಣೆ ಮುಗಿಯುವವರೆಗೆ ಸೆನ್ಸಾರ್ ಮಂಡಳಿ ಚಿತ್ರವನ್ನು ವೀಕ್ಷಿಸಲೇ ಇಲ್ಲ. ಚುನಾವಣೆಯ ಬಳಿಕ ವೀಕ್ಷಿಸಿ 20ಕ್ಕೂ ಹೆಚ್ಚು ಕಟ್‌ಗಳನ್ನು ಸೂಚಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಚಿತ್ರದ ಹೆಸರನ್ನು 'ಪದ್ಮಾವತ್' ಎಂದು ಬದಲಿಸಲು ಸೂಚಿಸಿದ್ದಾರೆ. ನಿಜಕ್ಕೂ ಸೆನ್ಸಾರ್ ಮಂಡಳಿಯ ಕೆಲಸವೇನು ಎನ್ನುವುದು ಅದರ ಅಧ್ಯಕ್ಷ ಪ್ರಸೂನ್ ಜೋಶಿಯವರಿಗೂ ಮರೆತುಹೋದಂತಿದೆ!

ಈ ಹಿಂದೆ ಕನ್ನಡಿಗ ಎಂ.ಎಸ್.ಸತ್ಯು ನಿರ್ದೇಶನದ ಗರಂ ಹವಾ (1973), ಆಂಧಿ (75), ಕಿಸ್ಸಾ ಕುರ್ಸಿ ಕಾ (77), ಬ್ಯಾಂಡಿಟ್ ಕ್ವೀನ್ (94), ಫೈರ್ (96), ಕಾಮಸೂತ್ರ (96), ಬ್ಲ್ಯಾಕ್ ಫ್ರೈಡೇ (2004), ಪರ್ಜಾನಿಯಾ (2005), ವಾಟರ್– ಚಿತ್ರಗಳು ನಿಷೇಧಗೊಂಡಿವೆ. ಆದರೆ ಈ ಚಿತ್ರಗಳು ಸೆನ್ಸಾರ್ ಮಂಡಳಿಯ ಮುಂದೆ ಬಂದು, ರಾಜಕೀಯ ಅಥವಾ ಸೆಕ್ಸ್ ವೈಭವೀಕರಣದ ಕಾರಣಕ್ಕೆ ನಿಷೇಧಗೊಂಡವು. ಈಗ ಸೆನ್ಸಾರ್ ಮಂಡಳಿ ಓಕೆ ಎಂದಿದ್ದರೂ, ಚಿತ್ರ ಬಿಡುಗಡೆಗೆ ಥಿಯೇಟರ್ ಮಾಲೀಕರು ಹೆದರುವಂತಹ ಪರಿಸ್ಥಿತಿ ಇದೆ!

ಜೈಗಢ್ ಕೋಟೆಯಲ್ಲಿ ಚಿತ್ರದ ಶೂಟಿಂಗ್ ನಡೆಯುತ್ತಿದ್ದಾಗ ಕರ್ಣಿ ಸೇನಾದ ಸದಸ್ಯರು ನುಗ್ಗಿ ಬನ್ಸಾಲಿ ಕಪಾಳಕ್ಕೆ ಹೊಡೆದು ಸೆಟ್ ಧ್ವಂಸಗೊಳಿಸಿದ್ದಾರೆ. ಸೃಜನಶೀಲ ನಿರ್ದೇಶಕ ನೊಬ್ಬನ ಮೇಲಿನ ಈ ಹಲ್ಲೆಯನ್ನು ಗಟ್ಟಿ ಧ್ವನಿಯಿಂದ ಪ್ರತಿಭಟಿಸಲೂ ಬಾಲಿವುಡ್ ತಾರೆಯರು ಹೆದರಿ ಕುಳಿತಿದ್ದಾರೆ! ಇದು ಅಭಿವ್ಯಕ್ತಿ ಪಾರತಂತ್ರ್ಯ!

ನಿರ್ಮಾಪಕ, ನಿರ್ದೇಶಕ, ಚಿತ್ರಕಥೆಗಾರ, ಸಂಗೀತ ನಿರ್ದೇಶಕರಾಗಿ ಬನ್ಸಾಲಿ ಗಟ್ಟಿ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಅವರಿಗೆ ಈವರೆಗೆ ನಾಲ್ಕು ರಾಷ್ಟ್ರಪ್ರಶಸ್ತಿಗಳು ಸಂದಿವೆ. 10 ಫಿಲಂಫೇರ್ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ. ಪ್ರತಿಭೆಯನ್ನು ಗೌರವಿಸಿ ಪದ್ಮಶ್ರೀ ಪುರಸ್ಕಾರ ಬಂದಿದೆ. ಈಗ ಈತ ನಿರ್ದೇಶಿಸಿರುವ ಚಿತ್ರವೊಂದು ಕೆಲವರ ಬೆದರಿಕೆಯಿಂದ ಬಿಡುಗಡೆ ಕಾಣಲಾಗದೆ ಒದ್ದಾಡುತ್ತಿದೆ ಎಂದರೆ ಈವರೆಗೆ ನಾವು ಇವರಿಗೆ ನೀಡಿರುವ ಪ್ರಶಸ್ತಿ, ಪುರಸ್ಕಾರಗಳಿಗೆ ಏನಾದರೂ ಅರ್ಥವಿದೆಯೆ?



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65